ಒ. ಎಸ್ ನಂ. 417 / 2022
ಪಿಡಬ್ಲೂ–1

ದಿನಾಂಕಃ 11.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು :– ಶ್ರೀ. ಪ್ರತಿವಾದಿ ಪರ ವಕೀಲರಿಂದಃ

ಪ್ರತಿವಾದಿಗಳು ವ್ಯವಸಾಯ ಮಾಡಲು ತೊಂದರೆ ಕೊಡುತ್ತಿದ್ದಾರೆ ಎಂದು ದಾವಾ ಸಲ್ಲಿಸಿರುತ್ತೇವೆ. ದಾವಾ ಸ್ವತ್ತು ನನ್ನ ಚಿಕ್ಕಪ್ಪ ಸುರೇಶ್ ರವರಿಗೆ ಸೇರಿದ್ದು, ನಿಪಿ 1 ರ ಛಾಪ ಕಾಗದವನ್ನು ಪ್ರತಿವಾದಿ 1 ರವರ ಹೆಸರಿನಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ನಾರಾಯಣಗೌಡ ಎಂಬುವವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ದಾವಾ ಸ್ವತ್ತು ವಾದಿಗೆ ಪಾಲುಪಟ್ಟಿ ಮುಖಾಂತರ ಬಂದಿರುತ್ತದೆ. ಸ. ನಂ. 45/4 ರಲ್ಲಿ 36 ವರೆ ಗುಂಂಟೆ ಯಂತೆ 4 ಜನ ವಿಭಾಗ ಮಾಡಿಕೊಂಡಿರುತ್ತಾರೆ. ಪ್ರತಿವಾದಿ 1 ರವರಿಗೆ ಮನೆ ಕಟ್ಟಿಕ್ಕೊಳ್ಳಲು 6 ಗುಂಟೆ ಜಮೀನನ್ನು ಬಿಟ್ಟಿರುತ್ತೇವೆ ಎಂದರೆ ಸರಿ. ಪಾಲುಪಟ್ಟಿಯಂತೆ ನಮ್ಮಗಳ ಹೆಸರಿಗೆ ಖಾತೆ ಯಾಗಿರುತ್ತದೆ. ವಾದಿಗೆ ಪಾಲು ಪಟ್ಟಿ ಪ್ರಕಾರ 36 ವರೆ ಗುಂಟೆ ಬಂದಿರುತ್ತದೆ ಎಂದರೆ ಸರಿ. 1 ಎಕರೆ 33 ಗುಂಟೆಗೆ ವಾದಿ ಖಾತೆ ಮಾಡಿಸಿಕೂಂಡಿರುತ್ತಾರೆ ಎಂದರೆ ಸಾಕ್ಷಿ ಅಜ್ಜಿಯ ಸ್ವತ್ತನ್ನು ಸೇರಿ ಖಾತೆ ಮಾಡಿಸಿಕೊಂಡಿರುತ್ತಾರೆ. ವಾದಿಯ ಅಜ್ಜಿ ಯಾವುದೇ ಲಿಖಿತ ದಾಖಲೆಯನ್ನು ವಾದಿಗೆ ಬರೆದುಕೊಟ್ಟಿರುವುದಿಲ್ಲ ಅವರನ್ನು ನೋಡಿಕೊಳ್ಳುತ್ತಿದ್ದರು ಎಂಬ ಕಾರಣಕ್ಕೆ ಖಾತೆ ಮಾಡಿಸಿಕೊಂಡಿರುತ್ತಸರೆ. ವಾದಿಗೆ ಬಂದಿರುವ ಜಮೀನ್ನು ಹೊರತು ಪಡಿಸಿ ಉಳಿದ ಸ್ವತ್ತನ್ನು ಖಾತೆ ಮಾಡಿಸಿಕೊಳ್ಳಲು ಯವೂದೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಸುಮಾರ 15–20 ವರ್ಷದಿಂದ ವಾದಿ ಲಬೆಂಗಳೂರಿನಲ್ಲಿ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡುತ್ತಿದ್ದಾರೆ. ವಾದಿಯ ಜಮೀನನುವ್ನ ಪ್ರತಿವಾದಿ 1 ರವರು ಗುತ್ತಿಗೆ ಪಡೆದುಕೊಂಡು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ.

2013 ರಲ್ಲಿ 1, 40,000 ಗಳನ್ನು 1 ನೇ ಪ್ರತಿವಾದಿಯಿಂದ ವಾದಿ ಪಡೆದುಕೊಂಡು ಹಣ ಕೊಡುವವರೆಗೆ ಜಮೀನುನ್ನು ಮಾಡಿಕೊಳ್ಳಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ವಿಭಾಗ ಸಮಯದಲ್ಲಿ ನನ್ನ ಅತ್ತೆ ರೇಖಾಮಣಿ ಯವರ ಮದುವೆಯಾಗಿರಲಿಲ್ಲ ಎಂದರೆ ಸರಿ. ಅವರ ಮದುವೆ 2012 ರಲ್ಲಿ ನಡೆಯಿತು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ 2 ಲಕ್ಷ ಹಣವನ್ನು ಮದುವೆ ಖರ್ಚಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರ ತಾಯಿಯನ್ನು ಅವರೇ ನೋಡಿಕೊಳ್ಳುತ್ತಿದ್ದ ಕಾರಣ ಅವರ ತಾಯಿ ಸ್ವತ್ತನ್ನು ಪ್ರತಿವಾದಿ 1 ರವರಿಗೆ ಕೊಟ್ಟು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ವಾದಿ ಆರೋಗ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ನನ್ನ ವಿರುದ್ದ ಸಿ ಸಿ ನಡೆಯುತ್ತಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ವಾದಿ ಹಾಜರಾಗುತ್ತಿದ್ದಾರೆ ಎಂದರೆ ಸರಿ. ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ವಾದಿ ಹಾಜರಾಗುತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ನನ್ನ ತಂದೆ ಪ್ರತಿವಾದಿ ವಿರುದ್ದ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನಿಮ್ಮ ಅತ್ತೆಯವರು ವಿಭಾಗ ಕೋರಿ ದಾವೆ

ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕೂ ನಮಗೆ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹೆಚ್.ಡಿ. ಕೋಟೆ